**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಂತಾಮಣಿ**

**ಸಿಸಿ ಸಂಖ್ಯೆ:128/2024**

ಚಾಸಾ: 02
ಫ್ರಾಸಾ: 03

ದಿನಾಂಕ 28.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ |
| ತಂದೆಯ ಹೆಸರು | : | ದೊಡ್ಡಯಲ್ಲಪ್ಪ |
| ವಯಸ್ಸು | : | 20 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸಸ್ಥಳ | : | ಮುಗಳಮಾರಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ಚಿಕ್ಕಪ್ಪ ಮತ್ತು ಆರೋಪಿ ಚಾಲಕನಾಗಿದ್ದು ಅವರನ್ನು ನಾನು ನೋಡಿದ್ದೇನೆ. ದಿಃ28.06.2024 ರಂದು ಬೆಳಿಗ್ಗೆ 11 ಗಂಟೆಯ ಸಮಯದಲ್ಲಿ ಮನೆಯಿಂದ ನಾನು ಮತ್ತು ನನ್ನ ತಾಯಿ ಪ್ಲಾಟಿನಂ ದ್ವಿಚಕ್ರ ವಾಹನದಲ್ಲಿ ಬ್ಯಾಂಕಿಗೆ ಹೋಗಲು ಬಟ್ಲಹಳ್ಳಿ ಕಡೆಗೆ ಹೋಗುತ್ತಿದ್ದು, ನಾವು ಮಿಂಡಿಗಲ್ ಬಳಿ ಬಂದಾಗ ಬೆಳಿಗ್ಗೆ 11.45 ಗಂಟೆ ಸಮಯವಾಗಿತ್ತು, ನಾನು ದ್ವಿಚಕ್ರ ವಾಹನವನ್ನು ರಸ್ತೆಯ ಎಡಬದಿಗಾದಂತೆ ಚಲಾಯಿಸಿಕೊಂಡು ಬರುತ್ತಿದ್ದಾಗ ಮಿಂಡಿಗಲ್ ತಿರುವಿನ ಬಳಿ ಎಸ್ ವಿ ಎಂ ಬಸ್ ಖಾಸಗಿ ಬಸ್ಸು ಒಂದು ಸದರಿ ಟರ್ನಿಂಗ್ ನಲ್ಲೂ ಸಹ ಅತ್ಯಂತ ವೇಗವಾಗಿ ಬಂದು ನನ್ನ ದ್ವಿಚಕ್ರ ವಾಹನ ಹ್ಯಾಂಡಲ್ ಭಾಗಕ್ಕೆ ತಗುಲಿದ ಕಾರಣ ನನ್ನ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿದ್ದರಿಂದ ನನ್ನ ತಾಯಿ ಬಲಭಾಗಕ್ಕೆ ಬಿದ್ದು ಚಕ್ರಕ್ಕೆ ಸಿಲುಕಿದ್ದು, ನಾನು ಎಡಭಾಗಕ್ಕೆ ಬಿದ್ದಿರುತ್ತೇನೆ. ನನ್ನ ತಾಯಿ ಬಸ್ ಚಕ್ರ ಹರಿದ ಕಾರಣ ನನ್ನ ತಾಯಿ ರಕ್ತ ಗಾಯಗಳಿಂದ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ. ನನಗೆ ಸಣ್ಣ ಪುಟ್ಟ ತರುಚಿದ ಗಾಯಗಳಾಗಿರುತ್ತವೆ. ನಂತರ ನಾನು ಚಾಸಾ 1 ರವರಿಗೆ ಕರೆ ಮಾಡಿ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನನ್ನ ತಂದೆ

ಸ್ಥಳಕ್ಕೆ ಬಂದಿರುತ್ತಾರೆ. ಸದರಿ ಬಸ್ ವಾಹನದ ಚಾಲಕ ಸ್ವಲ್ಪ ಮುಂದೆ ಬಸನ್ನು ನಿಲ್ಲಿಸಿ ಅಲ್ಲಿಂದ ಓಡಿ ಹೋಗಿರುತ್ತಾನೆ. ಈ ಬಗ್ಗೆ ನನ್ನ ಚಿಕ್ಕಪ್ಪ ಪಿರ್ಯಾದನ್ನು ಕೊಟ್ಟಿರುತ್ತಾರೆ. ಆ್ಯಂಬುಲೆನ್ಸನಲ್ಲಿ ನನ್ನ ತಾಯಿಯನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ.

ಅದೇ ದಿನ ಪೊಲೀಸರು ಸಂಜೆ ಸಮಯದಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ನಾನೇ ಸ್ಥಳ ತೋರಿಸಿಕೊಟ್ಟ ಮೇರೆಗೆ ಮಹಜರನ್ನು ಜರುಗಿಸಿರುತ್ತಾರೆ ಮತ್ತು ಪೊಟೋಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ಮಹಜರಗೆ ನಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಪಿ4 ಎಂದು ಸಾಕ್ಷಿಯ ಸಹಿಯನ್ನು 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ತಕ್ಷೀರು ಸ್ಥಳದ ಚಾಯಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ5 ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತ ಪಡಿಸಿದ ವಾಹನದ ಚಾಯಾಚಿತ್ರ ನಿಪಿ2 ನ್ನು ಗುರುತಿಸಿರುತ್ತಾರೆ. ಸದರಿ ಬಸ್ ಚಾಲಕನ ತಪ್ಪಿನಿಂದ ಅಪಘಾತ ಉಂಟಾಗಿರುತ್ತದೆ.

**ಶ್ರೀ. ವಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನಿರಾಕರಿಸಲಾಗಿರುತ್ತದೆ.**

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.